ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಲೋಕ್ ಆರಾಧೆ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಶ್ರೀಮತಿ ಕೆ.ಸಿ. ಸರಿತ ವಿರುದ್ಧ ಎ.ಎನ್. ವಿಜಯಕುಮಾರ್*

ಎಂ.ಎಫ್.ಎ.ಸಂಖ್ಯೆ: 23601/2013 (ಎಫ್ಸಿ), ದಿನಾಂಕ 25 ನೇ ಅಕ್ಟೋಬರ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಅಲೋಕ್ ಆರಾಧೆ:

ಈ ಅಪೀಲಿನಲ್ಲಿ ಅಪೀಲುದಾರರು, ಕೌಟುಂಬಿಕ ನ್ಯಾಯಾಲಯಗಳ ಅಧಿನಿಯಮ, 1984 ರ (ಸಂಕ್ಷಿಪ್ತತೆಗಾಗಿ ಇಲ್ಲಿ ಇನ್ನು ಮುಂದೆ ' ಅಧಿನಿಯಮ ' ಎಂದು ಉಲ್ಲೇಖಿಸಲಾಗಿದೆ) 19 ( 4) ( 1) ನೇ ಪ್ರಕರಣದ ಮೇರೆಗೆ ಹಿಂದೂ ವಿವಾಹ ಅಧಿನಿಯಮ, 1955 ರ 13 ( 1) ( i) ನೇ ಪ್ರಕರಣದ ಮೇರೆಗೆ ನಮೂದಿಸಲಾದ ಕಾರಣದ ಮೇಲೆ ವಿವಾಹದ ರದ್ದಿಯಾತಿಯ ಡಿಕ್ರಿಯನ್ನು ನೀಡುವ ಮೂಲಕ ಕೌಟುಂಬಿಕ ನ್ಯಾಯಾಲಯವು ಹೊರಡಿಸಿದ ದಿನಾಂಕ 30 ನೇ ಜುಲೈ, 2013 ರ ತೀರ್ಪಿನ ಸಿಂಧುತ್ವವನ್ನು ಪ್ರಶ್ನಿಸಿದ್ದಾರೆ.

2. ಈ ಅಪೀಲನ್ನು ಸಲ್ಲಿಸಲು ಕಾರಣವಾದ ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಲಾಗಿದೆ:ದಿನಾಂಕ 07.07.1991 ರಂದು ಪಕ್ಷಕಾರರ ನಡುವೆ ವಿವಾಹವೇರ್ಪಟ್ಟಿತ್ತು.ಪಕ್ಷಕಾರರು ಒಟ್ಟಿಗೇ ಜೀವನ ಸಾಗಿಸುತ್ತಿದ್ದು, ವಿವಾಹಬಂಧನದಿಂದ ನಾಗಶ್ರೀ ಹಾಗೂ ಗ್ರೀಷ್ಮ ಎಂಬ ಇಬ್ಬರು ಹೆಣ್ಣು ಮಕ್ಕಳು ಜನಿಸಿದ್ದರು.ಎದುರುದಾರರು ಕ್ರೌರ್ಯ ಹಾಗೂ ವ್ಯಭಿಚಾರದ ಆಧಾರದ ಮೇಲೆ ವಿವಾಹದ ರದ್ದಿಯಾತಿಯನ್ನು ಕೋರಿ 24.06.2008 ರಂದು ಅರ್ಜಿಯನ್ನು ಸಲ್ಲಿಸಿದ್ದಾರೆ.ಅಪೀಲುದಾರಳು, ಸುಸಂಸ್ಕೃತಳಲ್ಲ ಹಾಗೂ ಸಿಡುಕಿನ ಸ್ವಭಾವದವಳಾಗಿದ್ದು, ವಿವಾಹವಾದ ಆರು ತಿಂಗಳುಗಳಲ್ಲಿಯೇ ಎದುರುದಾರರೊಂದಿಗೆ ಜಗಳ ಪ್ರಾರಂಭಿಸಿದ್ದು, ವಾಸಿಸುತ್ತಿದ್ದ ಸ್ಥಳದಲ್ಲಿ ಅಸಹ್ಯಕರ ವಾತಾವರಣವನ್ನು ಸೃಜಿಸಿದಳೆಂದು ಅಪೀಲುದಾರರು ಅರ್ಜಿಯಲ್ಲಿ ತಿಳಿಸಿದ್ದರು.ಮುಂದುವರೆದು, ಅಪೀಲುದಾರಳು ತನ್ನನ್ನು ತನ್ನ ತಾಯಿಯಿಂದ ಬೇರ್ಪಡಿಸಿ ಮತ್ತೊಂದು ಮನೆಗೆ ಸ್ಥಳಾಂತರಿಸುವ ಸನ್ನಿವೇಶಗಳನ್ನು ಸೃಜಿಸಿದ್ದಳೆಂದು ಆಪಾದಿಸಲಾಗಿತ್ತು.ಅಪೀಲುದಾರಳು ಮಕ್ಕಳೆದುರಿನಲ್ಲೂ ಸಹ ಎದುರುದಾರನೊ ಂ ದಿಗೆ ಒರಟೊರಟಾಗಿ ನಡೆದುಕೊಳ್ಳುತ್ತಿದ್ದಳೆಂದು ವಾದಿಸಿದ್ದಾರೆ ಹಾಗೂ ಎದುರುದಾರನ ಆಶಯಗಳಿಗೆ ವಿರುದ್ಧವಾಗಿ ಪಕ್ಷಕಾರರ ಮಕ್ಕಳು ಅನುಕ್ರಮವಾಗಿ ಸುಮಾರು 3 ಹಾಗೂ 1 ನೇ ವರ್ಷದವರಾಗಿದ್ದಾಗ 1997-98ನೇ ವರ್ಷದಲ್ಲಿ ಅವಳು ಕಾಲೇಜಿಗೆ ಸೇರಿಕೊಂಡಳೆಂದು ಸಹ ವಾದಿಸಿದ್ದಾರೆ.

3. ಕಾಲೇಜನ್ನು ಸೇರಿರುವ ಬಗ್ಗೆ ಅಪೀಲುದಾರಳನ್ನು ಎದುರುದಾರರು ಪ್ರಶ್ನಿಸಿದಾಗ, ಎದುರುದಾರ ಹಾಗೂ ಆತನ ಕುಟುಂಬದ ಸದಸ್ಯರ ವಿರುದ್ಧ ವರದಕ್ಷಿಣೆ ಬೇಡಿಕೆ ಸಂಬಂಧ ದೂರನ್ನು ದಾಖಲಿಸಿದ್ದರೆಂದು ಸಹ ಹೇಳಿದ್ದಾರೆ.ಆದಾಗ್ಯೂ, ಕುಟುಂಬದ ಹಿರಿಯ ಸದಸ್ಯರು ಹಾಗೂ ಪೊಲೀಸು ಅಧಿಕಾರಿಗಳ ಮಧ್ಯಪ್ರವೇಶದಿಂದಾಗಿ ಹಿಂದೆ ಹೇಳಲಾದ ಪ್ರಕರಣವನ್ನು ರಾಜಿ ಮಾಡಿಕೊಳ್ಳಲಾಗಿತ್ತು.ಇದಾದ ತರುವಾಯ,

ವೈವಾಹಿಕ ಹಕ್ಕುಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ, ಒಂದು ಅರ್ಜಿಯನ್ನು ಎಂದರೆ ಎಂ.ಸಿ.ನಂ .3/2019 ನ್ನು ಅಪೀಲುದಾರಳು ಸಲ್ಲಿಸಿದ್ದರಿಂದ ನ್ಯಾಯಿಕ ಬೇರ್ಪಡೆಗಾಗಿ ಎದುರುದಾರನು ಅರ್ಜಿಯನ್ನು ಸಲ್ಲಿಸಿದ್ದನು.ಮತ್ತೆ ಹಿಂದೆ ಹೇಳಲಾದ ಪ್ರಕರಣಗಳನ್ನು ರಾಜಿ ಮಾಡಿಸಿ ಸೌಹಾರ್ದಯುತವಾಗಿ ಬಗೆಹರಿಸಲಾಗಿತ್ತು.

4. ಹಿಂದೂ ಅಧಿನಿಯಮದ 13 ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವುದಕ್ಕೆ ಸುಮಾರು ಎರಡು ವರ್ಷಗಳಿಗೂ ಮೊದಲು, ಎದುರುದಾರನು ಇಲ್ಲದಿರುವಾಗ ಅವನ ಮನೆಗೆ ಕೆಲವು ಅಪರಿಚಿತ ಪುರುಷರು ಮನೆಗೆ ಬಂದು ಹೋಗುತ್ತಿರುವ ಬಗ್ಗೆ ಗಾಳಿಸುದ್ದಿಯನ್ನು ಎದುರುದಾರರು ಕೇಳಿದ್ದುದಾಗಿ ಅರ್ಜಿಯಲ್ಲಿ ದೃಢಪಡಿಸಿದ್ದರು.ಅಷ್ಟೇ ಅಲ್ಲದೆ, ಬ್ಯಾಂಕಿನ ಕೆಲಸದ ಅವಧಿಯಲ್ಲಿ ಎದುರುದಾರರು ಒಮ್ಮೆ ಮನೆಗೆ ಬಂದಾಗ, ಒಬ್ಬ ಪುರುಷನನ್ನು ಮನೆಯಲ್ಲಿ ಕಂಡಿದ್ದು, ವಿಚಾರಿಸಿದಾಗ, ಹಿಂದೆ ಹೇಳಲಾದ ವ್ಯಕ್ತಿಯು ನಾಯಿಮರಿಯನ್ನು ಹುಡುಕಿಕೊಂಡು ಬಂದಿದ್ದುದಾಗಿ ಅಪೀಲುದಾರಳು ಅವನಿಗೆ ತಿಳಿಸಿದ್ದಳೆಂದು ವಾದಿಸಿದ್ದಾರೆ.ಇದಾದನಂತರ, ಅಪೀಲುದಾರಳು, ಪುಪಿಲ್ ಟೀ ಅಕಾಡೆಮಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿಕೊಂಡಿದ್ದಾಳೆ.ಹಲವಾರು ಸಾರಿ, ಅದರಲ್ಲೂ ನಿರ್ದಿಷ್ಟವಾಗಿ ಬಳ್ಳಾರಿಯ ಕೌಲ್ ಬಜಾರ್ ಬಳಿ ಮೂರನೇ ವ್ಯಕ್ತಿಯ ಮೋಟಾರು ಬೈಕಿನಲ್ಲಿ ಅಪೀಲುದಾರಳನ್ನು, ಎದುರುದಾರನು ನೋಡಿರುವುದಾಗಿಯೂ ದೃಢಪಡಿಸಿದ್ದಾನೆ.ವಿಚಾರಿಸಿದಾಗ, ಹಿಂದೆ ಹೇಳಲಾದ ವ್ಯಕ್ತಿಯ ಹೆಸರು ಜನಾರ್ಧನ ಎಂಬುದು ಅವನಿಗೆ ತಿಳಿದುಬಂತು.ಎದುರುದಾರನು ಬೆಂಗಳೂರಿಗೆ ಹೋಗಿದ್ದು, 09.06.2008 ರಂದು ಬಳ್ಳಾರಿಗೆ ವಾಪಸ್ಸಾಗಿದ್ದಾನೆ.ಆಗ ಎದುರುದಾರನು ಇಲ್ಲದೆ ಇದ್ದಾಗ, ಅಪೀಲುದಾರಳು, ತನ್ನ ಮನೆಯಲ್ಲಿಯೇ ಹಿಂದೆ ಹೇಳಲಾದ ಜನಾರ್ಧನನೊಂದಿಗೆ ಲೈಂಗಿಕ ಚಟುವಟಿಕೆಯಲ್ಲಿ ತೊಡಗಿದ್ದುದನ್ನು ದೃಢಪಡಿಸಲಾಗಿದೆ.ದಿನಾಂಕ: 09.06.2008 ರಂದು ಸಾಯಂಕಾಲ ಹಿಂದೆ ಹೇಳಲಾದ ಜನಾರ್ಧನ ಎಂಬುವನ ಜೊತೆಯಲ್ಲಿ ಅಪೀಲುದಾರಳು ಇರುವುದನ್ನು ಎದುರುದಾರನು ನೋಡಿದ್ದಾನೆ.ಇದಾದ ನಂತರ, ಕ್ರೌರ್ಯ ಹಾಗೂ ವ್ಯಭಿಚಾರದ ಆಧಾರದ ಮೇಲೆ ವಿವಾಹದ ರದ್ದಿಯಾತಿಗಾಗಿ ಕೋರಿ ಅರ್ಜಿಯನ್ನು ಸಲ್ಲಿಸಿದ್ದಾನೆ.

5. ಪಕ್ಷಕಾರರ ನಡುವಿನ ವಿವಾಹ ಹಾಗೂ ವಿವಾಹಬಂಧನದಿಂದ ಹೆಣ್ಣು ಮಕ್ಕಳು ಹುಟ್ಟಿರುವುದನ್ನು ಹೊರತುಪಡಿಸಿ, ಅರ್ಜಿಯಲ್ಲಿ ನೀಡಲಾದ ಹೇಳಿಕೆಗಳನ್ನು ನಿರಾಕರಿಸಿ ಅಪೀಲುದಾರಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾಳೆ.ಆಕ್ಷೇಪಣೆಗಳಲ್ಲಿ ಎದುರುದಾರನು ದೈಹಿಕ ವಿಕಲಚೇತನ ವ್ಯಕ್ತಿಯಾಗಿದ್ದು, ಒಂದೇ ಒಂದು ಕಣ್ಣಿರುತ್ತದೆ ಹಾಗೂ ಸದರಿ ವೈಕಲ್ಯತೆಯನ್ನು ಪ್ರಕಟಗೊಳಿಸದೆ ಪ್ರೀತಿ, ವಾತ್ಸಲ್ಯ ತೋರಿಸಿ ಅಪೀಲುದಾರಳನ್ನು ಮೋಸಗೊಳಿಸಿರುವನೆಂದು ವಾದಿಸಲಾಗಿತ್ತು.ಅಷ್ಟೇ ಅಲ್ಲದೆ, ವಿವಾಹವಾದ ಆರು ತಿಂಗಳುಗಳ ನಂತರ, ಎದುರುದಾರನು ಅವಳನ್ನು ಹಿಂಸಿಸಲು ಪ್ರಾರಂಭಿಸಿದನೆಂದು ಹಾಗೂ ಹಗೆತನದ ಭಾವನೆಯನ್ನು ಬೆಳೆಸಿಕೊಂಡು ಅಪೀಲುದಾರಳನ್ನು ಎದುರುದಾರನು ಹೊಡೆದು ಬೈಯ್ಯುತ್ತಿದ್ದನೆಂದು ವಾದಿಸಲಾಗಿತ್ತು. ಹಲವಾರು ರಾಜಿ-ಪಂಚಾಯತಿಗಳು ನಡೆದಿದ್ದು, ಪಂಚಾಯತಿಯಲ್ಲಿ ತೆಗೆದುಕೊಂಡ ನಿರ್ಣಯವನ್ನು ದೃಷ್ಟಿಯಲ್ಲಿಟ್ಟುಕೊಂಡು, ಎದುರುದಾರನು ಬೇರೆ ಮನೆಗೆ ಸ್ಥಳಾಂತರಗೊಳ್ಳಲು ಒಪ್ಪಿಕೊಂಡಿದ್ದಾಗಿಯೂ ವಾದಿಸಲಾಗಿದೆ.ಆದಾಗ್ಯೂ,ದಿನಾಂಕ: 26.06.2008 ರಂದು ಅಪೀಲುದಾರಳಿಗೆ ಸ್ವಲ್ಪ " ಪ್ರಸಾದವನ್ನು ಎದುರುದಾರನು ನೀಡಿದ್ದು, ಅದನ್ನು ಸೇವಿಸಿದ ನಂತರ, ಅವಳಿಗೆ ಪ್ರಸಾದದಲ್ಲಿ ವಿಷ ಸೇರಿಸಿ ಕೊಡಲು ಅವನು ಪ್ರಯತ್ನಿಸಿದ್ದರಿಂದ ಅವಳು ವಾಂತಿ ಮಾಡಿಕೊಳ್ಳಲು ಪ್ರಾರಂಭಿಸಿದಳೆಂದೂ ಸಹ ವಾದಿಸಲಾಗಿದೆ.

6. ಅಷ್ಟೇ ಅಲ್ಲದೆ, ದಿನಾಂಕ 13.09.1998 ರಂದು, ಅಪೀಲುದಾರಳ ತಂದೆಯೊಂದಿಗೆ ಜಗಳವನ್ನು ತೆಗೆದು, ಮಕ್ಕಳನ್ನು ಕರೆದುಕೊಂಡು ಅಪೀಲುದಾರಳನ್ನು ಬಿಟ್ಟು ಹೋಗಿದ್ದಾನೆ.ಇದಾದ ನಂತರದಿನಾಂಕ: 13.10.1998 ರಂದು ಬೆಳಿಗ್ಗೆ ಸುಮಾರು 11 ಗಂಟೆಯಲ್ಲಿ, ಎದುರುದಾರನು ವಾಹನದಲ್ಲಿ ಬಂದು ಮನೆಯಿಂದ ಎಲ್ಲಾ ಸಾಮಾನುಗಳನ್ನು ಕೊಂಡೊಯ್ದು ಬಳ್ಳಾರಿಯ ತಿಲಕ್ ನಗರಕ್ಕೆ ಮನೆಯನ್ನು ವರ್ಗಾಯಿಸಿದ್ದಾಗಿ ತಿಳಿಸಿದ್ದಾನೆ.ಎದುರುದಾರನು ಯಾವಾಗಲೂ ಅಶ್ಲೀಲ ವಿಡಿಯೋಗಳನ್ನು ನೋಡುತ್ತಿದ್ದು, ಅಪೀಲುದಾರಳಿಗೂ ಸಹ ಅವುಗಳನ್ನು ನೋಡುವಂತೆ ಒತ್ತಾಯಿಸುತ್ತಿದ್ದನೆಂದು ಸಹ ವಾದಿಸಲಾಗಿತ್ತು.ಎದುರುದಾರನು ಅಶ್ಲೀಲ ವಿಡಿಯೋಗಳ ವ್ಯವಹಾರದಲ್ಲಿ ತೊಡಗಿದ್ದ.ಅದನ್ನು ನೋಡುವಂತೆ ಹಾಗೂ ಅಂಥ ಅಶ್ಲೀಲ ಚಿತ್ರಗಳಲ್ಲಿ ನಟಿಸುವ ಂ ತೆ ಅಪೀಲುದಾರಳನ್ನು ಬಲವಂತಪಡಿಸುತ್ತಿದ್ದನೆಂದು ವಾದಿಸಲಾಗಿತ್ತು.ಅಪೀಲುದಾರನು ಯಾವಾಗಲೂ ಅಪರಿಚಿತ ವ್ಯಕ್ತಿಗಳನ್ನು ಮನೆಗೆ ಕರೆತಂದು ಅವರೊಂದಿಗೆ ಲೈಂಗಿಕ ಸಂಪರ್ಕ ಹೊಂದುವಂತೆ ಅಪೀಲುದಾರಳಿಗೆ ಒತ್ತಾಯಿಸುತ್ತಿದ್ದನೆಂದು ವಾದಿಸಲಾಗಿದೆ.

7. ಅಪೀಲುದಾರನು ತನ್ನ ಹಿಂಬಾಲಕನೊಂದಿಗೆ ಸೇರಿ, ಡಿವಿಡಿಯನ್ನು ಮಾರ್ಫಿಂಗ್ ಮಾಡುವ ಮೂಲಕ ಫಿಲ್ಮನ್ನು ಸೃಜಿಸಿದ್ದು ಅದರಲ್ಲಿ ಅಪೀಲುದಾರಳು ಅಪರಿಚಿತ ವ್ಯಕ್ತಿಗಳೊಂದಿಗೆ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಿರುವಂತೆ ತೋರಿಸಲಾಗಿದೆಯೆಂದು ಸಹ ವಾದಿಸಲಾಗಿದೆ.ಜನಾರ್ಧನ ಎಂಬ ಹೆಸರಿನ ಯಾರೇ ವ್ಯಕ್ತಿಯು ತನಗೆ ಗೊತ್ತಿತ್ತು ಎಂಬುದನ್ನು ಸಹ ಅವಳು ನಿರಾಕರಿಸಿದ್ದಾಳೆ.  ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹಿಂದೆ ಹೇಳಲಾದ ಜನಾರ್ಧನನು ಎದುರುದಾರನ ಸ್ನೇಹಿತನಾಗಿದ್ದನೆಂದೂ ವಾದಿಸಲಾಗಿತ್ತು.ಎದುರುದಾರನು,ದಿನಾಂಕ: 04.07.2008 ರಂದು ಅಪೀಲುದಾರಳು ಹಾಗೂ ಅವಳ ಮಕ್ಕಳನ್ನು ಇದ್ದಕ್ಕಿದ್ದಂತೆ ಬಿಟ್ಟು ಹೋಗಿದ್ದು, ಅವರಿಗೆ ಯಾವುದೇ ಜೀವನಾಂಶವನ್ನು ನೀಡಿಲ್ಲವೆಂಬ ಅಂಶವನ್ನು ಸಹ ಎತ್ತಿ ತೋರಿಸಲಾಗಿತ್ತು.

8. ಪಕ್ಷಕಾರರ ವಾದಗಳ ಆಧಾರದ ಮೇಲೆ, ಕೌಟುಂಬಿಕ ನ್ಯಾಯಾಲಯವು ಪಕ್ಷಕಾರರ ಸಾಕ್ಷ್ಯವನ್ನು ರೂಪಿಸಿ, ಹೊರಡಿಸಿ ದಾಖಲಿಸಿದೆ.ತನ್ನ ವಾದವನ್ನು ರುಜುವಾತುಪಡಿಸುವ ಸಲುವಾಗಿ ಅಪೀಲುದಾರಳು ಪ್ರಾ.ಸಾ .1 ಎಂದು ವಿಚಾರಣೆಗೆ ಒಳಗಾಗಿದ್ದಾಳೆ.ಒಬ್ಬ ಸಾಕ್ಷಿದಾರ ಎಂದರೆ ಪ್ರಾ.ಸಾ .2 ಎಂದು ಉಮೇಶ್ ಎಂಬುವರನ್ನು ವಿಚಾರಣೆ ಮಾಡಲಾಗಿತ್ತು ಹಾಗೂ ನಿಶಾನೆ ಪಿ .1 ರಿಂದ ಪಿ .17 ರ ವರೆಗಿನ ನಿಶಾನೆ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ.ಎದುರುದಾರರನ್ನು ಆರ್ಡಬ್ಲ್ಯೂ.ಎಂದು, ಇಬ್ಬರು ಸಾಕ್ಷಿದಾರರು ಎಂದರೆ ಕೆ. ಚಲಪತಿ ಹಾಗೂ ಎ. ನಾಗಶ್ರೀಯನ್ನು ಆರ್ಡಬ್ಲ್ಯೂ .2 ಹಾಗೂ ಆರ್ಡಬ್ಲ್ಯೂ.ಎಂದು ವಿಚಾರಣೆ ಮಾಡಲಾಗಿದ್ದು, ನಿಶಾನೆ ಆರ್ 1 ರಿಂದ ಆರ್ 22 ವರೆಗಿನ ದಸ್ತಾವೇಜುಗಳನ್ನು ಪರೀಕ್ಷಿಸಲಾಗಿದೆ.ಇದಾದನಂತರ, ಪ್ರಶ್ನಿತ ತೀರ್ಪಿನ ಪ್ರಕಾರ ಕೌಟುಂಬಿಕ ನ್ಯಾಯಾಲಯವು, ಕ್ರೌರ್ಯದ ಆಧಾರವನ್ನು ರೂಪಿಸಲು ಎದುರುದಾರರಿಗೆ ಸಾಧ್ಯವಾಗಿಲ್ಲವೆಂದು ಅಭಿಪ್ರಾಯಪಟ್ಟಿದೆ.ಆದಾಗ್ಯೂ, ವ್ಯಭಿಚಾರದ ಆಧಾರವನ್ನು ಮಾಡಲಾಗಿತ್ತೆಂದು ಅಭಿಪ್ರಾಯಪಟ್ಟಿದೆ.ಹಿಂದೆ ಹೇಳಲಾದ ವಾಸ್ತವಿಕ ಸಂಗತಿಗಳ ಹಿನ್ನೆಲೆಯಲ್ಲಿ ಈ ಅಪೀಲನ್ನು ಸಲ್ಲಿಸಲಾಗಿದೆ.

9. ಇದರಲ್ಲಿನ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ವ್ಯವಹರಣೆಗಳ ಪಕ್ಷಕಾರರ ಮಗಳಾದ ಆರ್. ಡಬ್ಲ್ಯೂ .3.ನಾಗಶ್ರೀಯ ನಿವೇದನೆಯ ಕಡೆಗೆ ಈ ನ್ಯಾಯಾಲಯದ ಗಮನವನ್ನು ಸೆಳೆಯುತ್ತಾ, ಅವಳ ಸಾಕ್ಷ್ಯದಿಂದ, ಅವಳ ಹಾಗೂ ಅವಳ ಸಹೋದರಿಯು ದಿನಾಂಕ 04.06.2008 ರಿಂದ 09.06.2008 ರವರೆಗಿನ ಅವಧಿಯ ನಡುವೆ ತಮ್ಮ ತಾಯಿಯೊಂದಿಗೆ ಇದ್ದುದರಿಂದ ಎದುರುದಾರನು ಹೂಡಿದ ಪ್ರಕರಣವು

ಒಪ್ಪಿಕೊಳ್ಳಲು ಅರ್ಹವಾಗಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆಯೆಂದು ನಿವೇದಿಸಿದ್ದಾರೆ.ಎದುರುದಾರನು ಹಾಜರುಪಡಿಸಿದ್ದ ಡಿವಿಡಿಯನ್ನು ಮಾರ್ಫಿಂಗ್ ಮಾಡಲಾಗಿದ್ದು, ಅಪೀಲುದಾರಳ ವಿರುದ್ಧ ವಿಚ್ಛೇದನದ ಡಿಕ್ರಿಯನ್ನು ಪಡೆಯುವುದಕ್ಕಾಗಿಯೇ ಒದಗಿಸಲಾಗಿದೆಯೆಂದು ಸಹ ನಿವೇದಿಸಿದ್ದಾರೆ.

10. ಅಷ್ಟೇ ಅಲ್ಲದೆ, ಪ್ರಾ.ಸಾ .2 ಉಮೇಶ್ ಎಂಬುವನು ಎದುರುದಾರನನ್ನು ಸಮರ್ಥಿಸಲಷ್ಟೆ ಕಟಕಟೆಗೆ ಬಂದಿದ್ದು, ಎದುರುದಾರನು ಡಿಜಿಟಲ್ ವಿಡಿಯೋ ರೆಕಾರ್ಡರ್ ಅನ್ನು ಖರೀದಿಸುವ ಸಂಬಂಧ ಯಾವುದೇ ಖರೀದಿಪಟ್ಟಿಯನ್ನು ಹಾಜರುಪಡಿಸಿಲ್ಲವೆಂದು ನಿವೇದಿಸಿದ್ದಾರೆ.ಇನ್ನೊಂದು ರೀತಿಯಲ್ಲಿ, ಎದುರುದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಡಿವಿಡಿಗಳಾಗಿರುವ ನಿಶಾನೆ ಪಿ .1 ರಿಂದ ಪಿ .3 ರವರೆಗೆ ಹಾಗೂ ನಿಶಾನೆ ಪಿ .15 ಎದುರುದಾರನ ಅಭಿಪ್ರಾಯವನ್ನು ಯುಕ್ತವಾಗಿ ರುಜುವಾತುಪಡಿಸಿದ್ದು, ಅಧಿವಿಚಾರಣಾ ನ್ಯಾಯಾಲಯವು, ಸ್ವತಃ ತಾನೇ ಸಾಕ್ಷ್ಯ ಎಂ ಅಧಿನಿಯಮದ 65-ಬಿ ಪ್ರಕರಣದಲ್ಲಿ ಒಳಗೊಂಡ ಅಗತ್ಯತೆಗಳನ್ನು ಪೂರೈಸಿದೆಯೆಂದು ನಿವೇದಿಸಿದ್ದಾರೆ.ಮುಂದುವರೆದು, ದಾಖಲೆಯಲ್ಲಿರುವ ಸಾಕ್ಷ್ಯದಲ್ಲಿನ ಹೇಳಿಕೆಯಲ್ಲಿ, ಕೌಟುಂಬಿಕ ನ್ಯಾಯಾಲಯವು ದಾಖಲಿಸಿದ ನಿರ್ಣಯಗಳು ನ್ಯಾಯಸಮ್ಮತ ಹಾಗೂ ಯುಕ್ತವಾಗಿದ್ದು, ಅವು ದಾಖಲೆಯಲ್ಲಿನ ಸಾಕ್ಷ್ಯವನ್ನು ಅತೀ ಜಾಗರೂಕತೆಯಿಂದ ವಿವೇಚನೆ ಮಾಡಿರುವುದನ್ನು ಆಧರಿಸಿದೆಯೆಂದು ನಿವೇದಿಸಿದ್ದಾರೆ.ತನ್ನ ನಿವೇದನೆಯನ್ನು ಸಮರ್ಥಿಸಲು, ಶಫಿ ಮಹಮದ್ -ವಿರುದ್ಧ-ಹಿಮಾಚಲ ಪ್ರದೇಶ ರಾಜ್ಯ ' ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಉಲ್ಲೇಖಿಸಿರುತ್ತಾರೆ.

11. ಎರಡೂ ಕಡೆಯವರು ಮಾಡಿದ ನಿವೇದನೆಗಳನ್ನು ನಾವು ಪರಿಗಣಿಸಿ, ದಾಖಲೆಗಳನ್ನು ಅವಗಾಹಿಸಿದ್ದೇವೆ.ವ್ಯಭಿಚಾರವನ್ನು ಆಪಾದಿಸುವ ವ್ಯಕ್ತಿಯ ಮೇಲೆ ಹೊಣೆಗಾರಿಕೆ ಇದ್ದು, ರುಜುವಾತಿನ ಪ್ರಮಾಣವು ಸಿವಿಲ್ ಪ್ರಕರಣದಲ್ಲಿಯಂತೆ ಎಂದರೆ ಸಂಭಾವ್ಯತೆಯ ಬಾಹುಳ್ಯತೆಯನ್ನು ಯುಕ್ತ ಸಂದೇಹವನ್ನು ಮೀರದ ರೀತಿಯಲ್ಲಿಯೇ ಇರುತ್ತದೆಯೆಂಬುದು ಕಾನೂನಿನ ಸುಸ್ಥಾಪಿತ ಪ್ರಸ್ತಾವನೆಯಾಗಿದೆ.ವ್ಯಭಿಚಾರವನ್ನು ನೇರ ಸಾಕ್ಷ್ಯದ ವಿಧಾನದಿಂದ ರುಜುವಾತುಪಡಿಸಲು ಸಾಧ್ಯವಿಲ್ಲ ಹಾಗೂ ಇದಕ್ಕೆ ಸಂಬಂಧಪಟ್ಟಂಥ ಊಹೆಯನ್ನೂ ಕೂಡ ಸಾಂದರ್ಭಿಕ ಸಾಕ್ಷ್ಯದ ಮೂಲಕ ಮಾತ್ರ ಮಾಡಬಹುದೆಂಬುದು ಕೂಡ ಕಾನೂನಿನಲ್ಲಿ ಸುಸ್ಥಾಪಿತವಾಗಿದೆ.ಸಾಕ್ಷ್ಯ ಎಣಿ ಅಧಿನಿಯಮದ 65- ಎ ಹಾಗೂ 65-ಬಿ ಪ್ರಕರಣವು ವಿಷಯದ ಹಾಗೂ ಅದರ ನೈಜತೆಯ ಸಂಪೂರ್ಣ ಸಂಕೇತವೆಂದು ಹೇಳಲಾಗುವುದಿಲ್ಲ ಮತ್ತು ಅದರ ಅಂಗೀಕಾರಕ್ಕಾಗಿ ಮುಂದುವರೆಯುವುದು ಹಿಂದೆ ಹೇಳಲಾದ ಸಾಕ್ಷ್ಯವನ್ನು ಹಾಜರುಪಡಿಸಿರುವ ವ್ಯಕ್ತಿಯು ಸಾಕ್ಷ್ಯ ಅಧಿನಿಯಮದ 65-ಬಿ ( 4) ನೇ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಒದಗಿಸುವ ಸ್ಥಿತಿಯಲ್ಲಿದ್ದಾನೆಯೇ ಎಂಬಂತಹ ವಾಸ್ತವಿಕ ಸನ್ನಿವೇಶವನ್ನು ಅವಲಂಬಿಸಿರುತ್ತದೆಂಬುದು ಕಾನೂನಿನಲ್ಲಿ ಅಂಗೀಕಾರಾರ್ಹವಾದ ನಿಯಮವಾಗಿದೆ.ಸಾಕ್ಷ್ಯ ಎಣಿ ಅಧಿನಿಯಮದ 65-ಬಿ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಹಾಜರುಪಡಿಸುವಿಕೆಯ ಅಗತ್ಯತೆಯು ಸ್ವರೂಪದಲ್ಲಿ ಪ್ರಕ್ರಿಯಾತ್ಮಕವಾದುದಾಗಿದ್ದು ನ್ಯಾಯದ ಹಿತಾಸಕ್ತಿಯು ಹಾಗೆ ಅಗತ್ಯಪಡಿಸಿದಾಗಲೆಲ್ಲಾ, ನ್ಯಾಯಾಲಯವು ಅದನ್ನು ಸಡಿಲಿಸಬಹುದಾಗಿದೆಯೆಂಬುದು ಸಮಾನ ಸುಸ್ಥಾಪಿತ ಕಾನೂನು ಪೂರ್ವಭಾವಿಸ್ಥಾನವಾಗಿದೆ.ಈ ಸಂಬಂಧದಲ್ಲಿ, ಮಹಮದ್ ಅಹ್ಮಲ್ ಅಮೀರ್ ಕಸಬ್ -ವಿರುದ್ಧ-ಮಹಾರಾಷ್ಟ್ರ ರಾಜ್ಯ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸಬಹುದು.ಪ್ರಾಥಮಿಕ ಸಾಕ್ಷ್ಯದ ವಿಧಾನದ ಮೂಲಕ ವಿದ್ಯುನ್ಮಾನ ಸಾಕ್ಷ್ಯವು ಸಾಕ್ಷ್ಯ ಎ ಅಧಿನಿಯಮದ 62 ನೇ ಪ್ರಕರಣದ ಅಡಿಯಲ್ಲಿ ಬರುತ್ತಿದ್ದು, ಅದಕ್ಕೆ ಸಾಕ್ಷ್ಯ ಅಧಿನಿಯಮದ 65-ಬಿ ಪ್ರಕರಣದ ಮೇರೆಗೆ ನಿಯಮಿಸಲಾದ ಪ್ರಕ್ರಿಯೆಯು ಅನ್ವಯವಾಗುವುದಿಲ್ಲ ಎಂಬುದು ಸಮಾನವಾಗಿ, ಕಾನೂನಿನ ಸುಸ್ಥಾಪಿತ

ಪೂರ್ವಸ್ಥಿತಿಯಾಗಿದೆ.ಆದಾಗ್ಯೂ, ವಿದ್ಯುನ್ಮಾನ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ ಎರಡನೇ ಸಾಕ್ಷ್ಯವನ್ನು ಒದಗಿಸಲಾದ ಪಕ್ಷದಲ್ಲಿ, ಸಾಕ್ಷ್ಯ ಅಧಿನಿಯಮದ 65-ಬಿ ಪ್ರಕರಣದಲ್ಲಿ ಒಳಗೊಂಡ ಅಗತ್ಯತೆಯನ್ನು, ಅನ್ವರ್ ಪಿ.ವಿ. -ವಿರುದ್ಧ ಪಿ.ಕೆ. ಬಷೀರ್ ಹಾಗೂ ಇತರರು ಮೊಕದ್ದಮೆಯ ಅಗತ್ಯತೆಗಳನ್ನು ಪಾಲಿಸಬೇಕು.

12. ಹಿಂದೆ ಹೇಳಲಾದ ನಿರ್ಣಯಗಳನ್ನು ಶಫಿ ಮಹಮದ್ (ಮೇಲಿನ) ಪ್ರಕರಣದಲ್ಲಿನ ಅನುಮೋದನೆಯೊಂದಿಗೆ ಉಲ್ಲೇಖಿಸಲಾಗಿದೆ ಹಾಗೂ ವಿದ್ಯುನ್ಮಾನ ಸಾಕ್ಷ್ಯವು ನಂಬಲರ್ಹ ಹಾಗೂ ಸುಸಂಗತವಾಗಿದ್ದರೆ, ನ್ಯಾಯಾಲಯಕ್ಕೆ ಅದರ ವಿಶ್ವಾಸಾರ್ಹತೆಯ ಬಗ್ಗೆ ಮನವರಿಕೆಯಾಗುವುದಕ್ಕೆ ಒಳಪಟ್ಟು ಎ ಅದನ್ನು ಗ ಖಂಡಿತವಾಗಿಯೂ ಅಂಗೀಕರಿಸಬಹುದು ಮತ್ತು ಅದರ ಅಂಗೀಕಾರಾರ್ಹತೆಗೆ ಸಂಬಂಧಿಸಿದ ಕಾರ್ಯವಿಧಾನವು ಅಂಥ ಸಾಕ್ಷ್ಯವನ್ನು ಹಾಜರುಪಡಿಸುವ ವ್ಯಕ್ತಿಯು, ಸಾಕ್ಷ್ಯ ಎ ಅಧಿನಿಯಮದ 65-ಬಿ ( 4) ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ಹಾಜರುಪಡಿಸುವ ಸ್ಥಿತಿಯಲ್ಲಿ ಇದ್ದಾನೆಯೇ ಎಂಬ ವಾಸ್ತವಿಕ ಸನ್ನಿವೇಶವನ್ನು ಅವಲಂಬಿಸಿರುತ್ತದೆ ಎಂದು ಅಭಿಪ್ರಾಯಪಟ್ಟಿದೆ.ಆದಾಗ್ಯೂ, ಪ್ರಕ್ರಿಯಾತ್ಮಕ ಸ್ವರೂಪದಲ್ಲಿರುವ ಪ್ರಮಾಣಪತ್ರ ಒದಗಿಸುವ ಅಗತ್ಯದ ಅನ್ವಯತೆಯನ್ನು, ನ್ಯಾಯಿಕ ಹಿತಾಸಕ್ತಿಯು ಹಾಗೆ ಸಮರ್ಥಿಸಿದಾಗಲೆಲ್ಲಾ ಅದನ್ನು ನ್ಯಾಯಾಲಯವು ಸಡಿಲಿಸಬಹುದೆಂದು ಅಭಿಪ್ರಾಯಪಡಲಾಗಿದೆ.

13. ರಾಮ್ಸಿಂಗ್ ಹಾಗೂ ಇತರರು -ವಿರುದ್ಧ-ಸಿಓಎಲ್ ರಾಮ್ ಸಿಂಗ್, ಮೊಕದ್ದಮೆಯಲ್ಲಿ ಅನುಮೋದನೆಯೊಂದಿಗೆ ಉದ್ಧರಿಸಲಾಗಿರುವ ಆರ್. -ವಿರುದ್ಧ ಮನ್ಸೂದ್ ಆಯ್ಕೆ ಹಾಗೂ ಆರ್ -ವಿರುದ್ಧ-ರಾಲ್ಬನ್ ಹಾಗೂ ಅಮೆರಿಕನ್ ಲಾ, (ಅಮೆರಿಕನ್ ಜುರಿಡೆನ್ಸ್ 2 ಡಿ (ಸಂಪುಟ 29) ಪುಟ 494) ದ ಉದ್ಧೃತ ಭಾಗಗಳಲ್ಲಿ ಹೊಸ ಹೊಸ ತಂತ್ರಗಳು ಹಾಗೂ ಹೊಸ ಸಾಧನ ಸಲಕರಣೆಗಳ ಮೂಲಕ ಪಡೆದುಕೊಳ್ಳಬೇಕಾದ ಕಾನೂನಿನ ಸಾಕ್ಷ್ಯದ ಅನುಕೂಲಗಳನ್ನು ನಿರಾಕರಿಸುವುದು ತಪ್ಪಾಗುತ್ತದೆ.ಆದರೆ, ಧ್ವನಿಮುದ್ರಣ ನಿಖರತೆಯನ್ನು ಸಾಬೀತುಪಡಿಸಬಹುದೆಂದು ಅಭಿಪ್ರಾಯಪಡಲಾಗಿದೆ.ಅಷ್ಟೇ ಅಲ್ಲದೆ, ಪ್ರತಿಯೊಂದು ಪ್ರಕರಣದ ಎಲ್ಲಾ ಸನ್ನಿವೇಶಗಳ ಹಿನ್ನೆಲೆಯಲ್ಲಿ ಅಂಥ ಸಾಕ್ಷ್ಯವನ್ನು ಯಾವಾಗಲೂ ಕೆಲವು ಎಚ್ಚರಿಕೆಗಳೊಂದಿಗೆ ಪರಿಗಣಿಸಬೇಕು ಹಾಗೂ ನಿರ್ಧರಿಸಬೇಕು.ತುಕಾರಾಮ್ ಎಸ್ ದಿಘೋಲ್ -ವಿರುದ್ಧ ಮಾಣಿಕ್ರಾವ್ ಶಿವಾಜಿ ಕೋಕಟೆ 7 ' ಪ್ರಕರಣದಲ್ಲಿ ಅದೇ ರೀತಿಯಲ್ಲಿ ಅಭಿಪ್ರಾಯಪಡಲಾಗಿದೆ.ಅದರಲ್ಲಿ ಹೊಸ ಹೊಸ ತಂತ್ರಗಳು ಹಾಗೂ ಸಾಧನ ಸಲಕರಣೆಗಳು ದಿನನಿತ್ಯದ ವಿಧಾನವಾಗಿದ್ದು, ಅಂಥ ಸಾಧನಗಳು ಅಕ್ರಮ ಕಾರ್ಯಗಳಿಗೆ ಎಡೆ ಮಾಡಿಕೊಡುತ್ತಿದ್ದು, ಅಂಥ ಸಾಕ್ಷ್ಯದ ಅಂಗೀಕಾರಾರ್ಹತೆಯನ್ನು ತೀರ್ಮಾನಿಸಬಹುದಾದ ಬಗ್ಗೆ ಯಾವುದೇ ವ್ಯಾಪಕ ಗ ನಿಯಮವನ್ನು ವಿಧಿಸಿರುವುದಿಲ್ಲ.

14. ಹಿಂದೆ ಹೇಳಲಾದ ಸುಸ್ಥಾಪಿತ ಕಾನೂನಿನ ಪೂರ್ವಸ್ಥಾನದ ಹಿನ್ನೆಲೆಯಲ್ಲಿ, ನಾವು, ಪ್ರಾ.ಸಾ .1 ಎಂದು ತಾನೇ ವಿಚಾರಣೆಗೊಳಗಾಗಿರುವ ಎದುರುದಾರನ ಸಾಕ್ಷ್ಯವನ್ನು ಪ್ರಸ್ತಾಪಿಸಬಹುದು.ಎದುರುದಾರನು ತನ್ನ ಸಾಕ್ಷ್ಯದಲ್ಲಿ, ಅಪೀಲುದಾರಳು ತನ್ನ ಪತ್ನಿಯಾಗಿದ್ದು, ತಮ್ಮ ವಿವಾಹವು ದಿನಾಂಕ 07.07.1991 ರಲ್ಲಿ ನಡೆದಿತ್ತೆಂದು ತಿಳಿಸಿದ್ದಾರೆ.ಅಷ್ಟೇ ಅಲ್ಲದೆ, ಅಪೀಲುದಾರಳು ತನ್ನ ತಾಯಿಯಿಂದ ಪ್ರತ್ಯೇಕವಾಗಿ ಬೇರೊಂದು ಮನೆ ಮಾಡುವಂತಹ ಸನ್ನಿವೇಶಗಳನ್ನು ಸೃಜಿಸಿದಳೆಂದು ಎದುರುದಾರನು ತಿಳಿಸಿದ್ದಾನೆ.ಅಷ್ಟೇ ಅಲ್ಲದೆ, ನ್ಯಾಯಿಕ ಪ್ರತ್ಯೇಕತೆಯನ್ನು ಕೋರಿ ಎದುರುದಾರನು ವ್ಯವಹರಣೆಯನ್ನು ಸಲ್ಲಿಸಿದ್ದರಿಂದ, ಅಪೀಲುದಾರಳು ವೈವಾಹಿಕ ಹಕ್ಕುಗಳನ್ನು ಪೂರ್ವಸ್ಥಿತಿಗೆ ತರಲು ಕೋರಿ ಅರ್ಜಿ ಸಲ್ಲಿಸಿದ್ದಳು.ಆದಾಗ್ಯೂ, ಹಿಂದೆ ಹೇಳಲಾದ ಎರಡೂ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿತ್ತು.ಅಷ್ಟೇ ಅಲ್ಲದೆ, ಅವನು ಒಮ್ಮೆ ಬ್ಯಾಂಕಿನ ಕೆಲಸದ

ಅವಧಿಯಲ್ಲಿ ಮನೆಗೆ ಬಂದಿದ್ದಾಗ, ಒಬ್ಬ ಪುರುಷನು ಅಪೀಲುದಾರಳೊಂದಿಗೆ ಮನೆಯಲ್ಲಿದ್ದುದು ಕಂಡುಬಂದಿದ್ದು, ಅವನು ಈ ಬಗ್ಗೆ ಅಪೀಲುದಾರಳನ್ನು ಪ್ರಶ್ನಿಸಿದಾಗ, ಅವಳು ಹಿಂದೆ ಹೇಳಲಾದ ವ್ಯಕ್ತಿಯು ನಾಯಿಮರಿಯನ್ನು ಹುಡುಕಿಕೊಂಡು ಬಂದಿದ್ದನೆಂದು ಅವಳು ತಿಳಿಸಿದ್ದುದಾಗಿ ತನ್ನ ಸಾಕ್ಷ್ಯದ 6 ನೇ ಕಂಡಿಕೆಯಲ್ಲಿ ಅವನು ತಿಳಿಸಿದ್ದಾನೆ.ಇದಾದ ನಂತರ ತನ್ನ ಸಾಕ್ಷ್ಯದ 8 ನೇ ಕಂಡಿಕೆಯಲ್ಲಿ ಅವನು,ದಿನಾಂಕ: 04.06.2008 ರಂದು ರಾತ್ರಿಯಲ್ಲಿ, ಅವನು ಬೆಂಗಳೂರಿಗೆ ಹೋಗಿದಿನಾಂಕ: 09.06.2008 ರಂದು ಬೆಳಿಗ್ಗೆ ಬಳ್ಳಾರಿಗೆ ಹಿಂದಿರುಗಿದಾಗ, ಹಾಗೂ ಸಂಶಯದ ಕಾರಣದಿಂದದಿನಾಂಕ: 04.06.2008 ರಂದು ಮನೆಯನ್ನು ಬಿಡುತ್ತಿರುವಾಗ, ಅವನು ಬೆಡ್ರೂಮಿನಲ್ಲಿ ಚಲಿಸುವ ಕ್ಯಾಮೆರಾವನ್ನು ಜೋಡಿಸಿದ್ದು, ಕ್ಯಾಮೆರಾದಲ್ಲಿ ಅಪೀಲುದಾರಳು ಜನಾರ್ಧನ ಎಂಬೊಬ್ಬನ ಜೊತೆ ಲೈಂಗಿಕ ಚಟುವಟಿಕೆಯಲ್ಲಿ ಭಾಗಿಯಾಗಿದ್ದನ್ನು ದಾಖಲಿಸಿತ್ತು ಎಂಬುದಾಗಿ ತನ್ನ ಸಾಕ್ಷ್ಯದಲ್ಲಿನ 8 ನೇ ಕಂಡಿಕೆಯಲ್ಲಿ ತಿಳಿಸಿದ್ದಾನೆ.

15. ಅಷ್ಟೇ ಅಲ್ಲದೆ, ಅಪೀಲುದಾರಳ ವ್ಯಭಿಚಾರದ ನಡವಳಿಕೆಯನ್ನು ಸಹಿಸಲು ಅವನಿಗೆ ಸಾಧ್ಯವಾಗದ್ದರಿಂದ, ದಿನಾಂಕ 10.06.2008 ರಂದು ಮನೆಯನ್ನು ತೊರೆದುದಾಗಿ ಅವನು ತಿಳಿಸಿದ್ದಾನೆ.ಪ್ರಾ.ಸಾ .1 ಇವನು ಡಿವಿಡಿಗಳಾಗಿರುವ ನಿಶಾನೆ ಪಿ .1 ರಿಂದ ಪಿ .3 ಹಾಗೂ ನಿಶಾನೆ ಪಿ .15 ನ್ನು, ಹಾಜರುಪಡಿಸಿದ್ದಾನೆ.ಅವನನ್ನು ಅಪೀಲುದಾರಳನ್ನು ಹೆಚ್ಚಿನ ಪಾಟೀಸವಾಲಿಗೆ ಅವರು ಒಳಪಡಿಸಿದ್ದಾರೆ.ಪಾಟೀ-ಸವಾಲಿನಲ್ಲಿ, ಮುಂದುವರಿದು, ಅವನು ಸ್ವತಃ ತಾನೇ 04.06.2008 ರಿಂದ 09.06.2008 ರವರೆಗಿನ ಅವಧಿಯವರೆಗೆ ಡಿಜಿಟಲ್ ವಿಡಿಯೋ ರೆಕಾರ್ಡರ್ನನ್ನು ಜೋಡಿಸಿದ್ದುದಾಗಿ ಒಪ್ಪಿಕೊಂಡಿದ್ದಾನೆ.ನಿಶಾನೆ ಪಿ .15 ಡಿಜಿಟಲ್ ವಿಡಿಯೋ ರೆಕಾರ್ಡರ್ ಆಗಿರಲಿಲ್ಲವೆಂದು ಹಾಗೂ ಕೌಟುಂಬಿಕ ನ್ಯಾಯಾಲಯದ ಮುಂದೆ ಅವನು ಹಾಜರುಪಡಿಸಿರುವ ಡಿವಿಡಿಗೆ, ಡಿವಿಆರ್ನ ಅಂಶಗಳನ್ನು ಪರಿವರ್ತಿಸಲಾಗುವುದಿಲ್ಲವೆನ್ನುವ ಸೂಚನೆ ನೀಡಿದ್ದು, ಅದನ್ನು ನಿರಾಕರಿಸಿದ್ದಾನೆ.ಅಷ್ಟೇ ಅಲ್ಲದೆ, ಅಂಥ ಡಿಜಿಟಲ್ ವಿಡಿಯೋ ರೆಕಾರ್ಡರ್ ಅನ್ನು ನೀಡಿದಾಗಲೆಲ್ಲಾ, ಕೈಪಿಡಿಯನ್ನು ಒಳಗೊಂಡ ವೋಚರನ್ನು ಡೀಲರನ್ನು ನೀಡಬೇಕಾಗಿತ್ತು ಎಂಬುದನ್ನು D ಒಪ್ಪಿಕೊಂಡಿದ್ದಾನೆ.ಅಷ್ಟೇ ಅಲ್ಲದೆ, ಡೀಲರನಿಂದ ವೋಚರ್ ಮತ್ತು ಕೈಪಿಡಿಯನ್ನು ಪಡೆದುಕೊಂಡಿಲ್ಲವೆಂದು ತಿಳಿಸಲಾಗಿದೆ.

16. ಡಿವಿಡಿಯಲ್ಲಿ ಮಾರ್ಫಿಂಗ್ ಮಾಡಲಾಗಿತ್ತು ಎಂಬ ಸೂಚನೆಯನ್ನು ನೀಡಲಾಗಿದ್ದು ಅವನು ಅದನ್ನು ನಿರ್ದಿಷ್ಟವಾಗಿ ನಿರಾಕರಿಸಿದ್ದಾನೆ.ಪ್ರಸಕ್ತ ಮೊಕದ್ದಮೆಯಲ್ಲಿನ ಎದುರುದಾರನುದಿನಾಂಕ: 04.06.2008 ರಿಂದ 09.06.2008 ರ ನಡುವೆ ಅವನು ಮನೆಯಲ್ಲಿ ಇಲ್ಲದಿರುವ ಸಮಯದಲ್ಲಿ ನಡೆದಿರುವ ಚಟುವಟಿಕೆಗಳನ್ನು ದಾಖಲಿಸಿರುವ ಡಿಜಿಟಲ್ ವಿಡಿಯೋ ರೆಕಾರ್ಡರ್ ಅನ್ನು ಜೋಡಿಸಿರುವ ವ್ಯಕ್ತಿಯಾಗಿದ್ದಾನೆ ಎಂಬುದನ್ನು ಇಲ್ಲಿ ಸೂಚಿಸುವುದು ಯುಕ್ತವಾದುದಾಗಿದೆ.ಹಿಂದೆ ಹೇಳಲಾದ ಡಿಜಿಟಲ್ ವಿಡಿಯೋ ರೆಕಾರ್ಡರ್ ಅನ್ನು ನಿಶಾನೆ ಪಿ .15 ಎಂದು ಗುರುತಿಸಿ ಹಾಜರುಪಡಿಸಲಾಗಿದೆ.ಸ್ವತಃ ಎದುರುದಾರನೇ ಪ್ರಾ.ಸಾ .2 ರ ಎಂದರೆ ಉಮೇಶ್ ಎಂಬುವನ ಸಹಾಯಪಡೆದು ಸದರಿ ಡಿವಿಡಿಯ ರೆಕಾರ್ಡಿಂಗ್ನ ಅಂಶಗಳನ್ನು ಕಂಪ್ಯೂಟರ್ಗೆ ವರ್ಗಾಯಿಸಿದ್ದಾನೆ ಹಾಗೂ ಎದುರುದಾರನು ಡಿವಿಆರ್ನ ಅಂಶಗಳನ್ನು ಕಂಪ್ಯೂಟರ್ ಮೂಲಕ ಡಿವಿಡಿಗೆ ವರ್ಗಾಯಿಸಿದ್ದಾನೆ.ಎದುರುದಾರನು ತನ್ನ ಅಫಿಡಾವಿಟ್ನಲ್ಲಿ ಹಾಗೆ ತಿಳಿಸಿದ್ದಾನೆ.ಆದುದರಿಂದ ಪ್ರಕರಣದ ವಾಸ್ತವಿಕ ಸಂಗತಿ ಸನ್ನಿವೇಶದಲ್ಲಿ ಮತ್ತು ಪ್ರಾ.ಸಾ .1 ರ ಸಾಕ್ಷ್ಯವನ್ನು ಗಣನೆಗೆ ತೆಗೆದುಕೊಂಡು, ಸ್ವರೂಪದಲ್ಲಿ ಪ್ರಕ್ರಿಯಾತ್ಮಕವಾದ ಪ್ರಮಾಣಪತ್ರದ ಅಗತ್ಯತೆಯನ್ನು ಅದರಲ್ಲೂ ವಿಶೇಷವಾಗಿ, ಹಿಂದೆ ಹೇಳಲಾದ ದೃಢಹೇಳಿಕೆಗೆ ಸಂಬಂಧಪಟ್ಟಂತೆ ಪ್ರಾ.ಸಾ .1 ರ ಸಾಕ್ಷ್ಯ ರುಜುವಾತಿಗೆ ಪಾಟೀ ಲ್ಯು ಸವಾಲಿನಲ್ಲಿ

ಆಕ್ಷೇಪಣೆಯನ್ನು ಮಾಡಲಾಗಿಲ್ಲವೆಂಬ ಅಂಶವನ್ನು ಗಣನೆಗೆ ತೆಗೆದುಕೊಂಡು ನ್ಯಾಯದ ಹಿತಾಸಕ್ತಿಯೊಂದಿಗೆ ವಿನಾಯಿತಿ ನೀಡಲಾಗುವುದು.ಈ ಹಂತದಲ್ಲಿ ನಾವು, ನಿರ್ದಿಷ್ಟ ಅಂಶದ ಸಂಬಂಧ ಸಾಕ್ಷಿದಾರರ ಸಾಕ್ಷ್ಯ ರುಜುವಾತನ್ನು ಪ್ರಶ್ನಿಸಿದರೆ, ಅದನ್ನು ಅಂಗೀಕೃತವೆಂದು ತೆಗೆದುಕೊಳ್ಳುವುದು ಸರಳ ಕಾನೂನು ಎಂದು ಹೇಳಬಹುದು.ಮುದ್ದಸಾನಿ ವೆಂಕಟ ನರಸಯ್ಯ ವಿರುದ್ದ ಮುದ್ದಸಾನಿ ಸರೋಜನ.ಯಾವುದೇ ರೀತಿಯಲ್ಲೂ ಸಾಕ್ಷ್ಯ ಅಧಿನಿಯಮದ 65-ಬಿ ( 4) ಪ್ರಕರಣದಲ್ಲಿ ಒಳಗೊಂಡ ಪ್ರಕ್ರಿಯಾ ಅಗತ್ಯತೆಗಳನ್ನು ಸಡಿಲಿಸಲು ಇದು ಸೂಕ್ತ ಪ್ರಕರಣವಾಗಿದೆ.

17. ಈ ಹಂತದಲ್ಲಿ, ಕೌಟುಂಬಿಕ ನ್ಯಾಯಾಲಯದ ಮುಂದೆ ಪಕ್ಷಕಾರರ ಪರವಾಗಿ ಹಾಜರಾಗಿರುವ ಇಬ್ಬರೂ ನ್ಯಾಯವಾದಿಗಳ ಸಮ್ಮುಖದಲ್ಲಿ ಮತ್ತು ರಹಸ್ಯ ವ್ಯವಹರಣೆಯಲ್ಲಿ ನಿಶಾನೆ ಪಿ .15 ನ್ನು ಪ್ರದರ್ಶಿಸಲಾಯಿತು ಎಂಬುದನ್ನು ಇಲ್ಲಿ ಗಮನಿಸುವುದು ಯುಕ್ತವಾಗಿದೆ.ದಿನಾಂಕ 04.06.2008 ರಿಂದ 09.06.2008 ರವರೆಗಿನ ಅವಧಿಯಲ್ಲಿ ದಾಖಲಿಸಲಾದ ಡಿವಿಡಿಯ ಅಂಶಗಳನ್ನು ಪಕ್ಷಕಾರರ ನ್ಯಾಯವಾದಿಗಳ ಸಮ್ಮುಖದಲ್ಲಿ ಕೌಟುಂಬಿಕ ನ್ಯಾಯಾಲಯವು ವೀಕ್ಷಿಸಿತು.ಪಕ್ಷಕಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು ನಮ್ಮ ಮುಂದೆ ಇಡಲಾದ ಡಿವಿಡಿಗಳ ಅಂಶಗಳ ಬಗ್ಗೆ ಯಾವುದೇ ತಕರಾರು ಎತ್ತಿರುವುದಿಲ್ಲ.ಹಿಂದೆ ಹೇಳಲಾದ ಧ್ವನಿಮುದ್ರಿಕೆಗಳನ್ನು ಯಾವುದೇ ನಿರ್ಬಂಧವಿಲ್ಲದೆ ಮಾಡಲಾಗಿದ್ದು, ಕ್ಯಾಮೆರಾದ ಸಮೀಪದಲ್ಲಿಯೇ ಸಹಜವಾಗಿಯೇ ಲೈಂಗಿಕ ಚಟುವಟಿಕೆಗಳು ನಡೆದಿವೆಯೆಂಬ ನಿರ್ಣಯವನ್ನು ತೀರ್ಪಿನ 17 ನೇ ಕಂಡಿಕೆಯಲ್ಲಿ ಕೌಟುಂಬಿಕ ನ್ಯಾಯಾಲಯವು ದಾಖಲಿಸಿದೆ.ಅಷ್ಟೇ ಅಲ್ಲದೆ, ನಿಶಾನೆ ಪಿ .15 ಮೂಲ ಸಾಧನವಾಗಿದ್ದು ಅದರ ಮೂಲಕ ನಿಶಾನೆ ಪಿ .1 ರಿಂದ ನಿಶಾನೆ ಪಿ .3 ರ ಎಂದರೆ ಡಿವಿಡಿಗಳ ಅಡಕಾಂಶಗಳನ್ನು ದಾಖಲಿಸಲಾಗಿದೆ ಎಂದು ಅಭಿಪ್ರಾಯಪಡಲಾಗಿದೆ.ಆದ್ದರಿಂದ, ನಿಶಾನೆ ಪಿ .1 ರಿಂದ ಪಿ .3 ರವರೆಗಿನ ಅಂಶಗಳನ್ನು ರುಜುವಾತುಪಡಿಸಲು ನಿಶಾನೆ ಪಿ .15 ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಪ್ರಾಥಮಿಕ ಸಾಕ್ಷ್ಯವಾಗಿದೆ.ಆದುದರಿಂದ, ಅಪೀಲುದಾರಳು ಜನಾರ್ಧನನೊಂದಿಗೆ ಒಂದು ಸಾರಿಯಲ್ಲದೆ ದಿನಾಂಕ 09.06.2008 ರಂದು ಎದುರುದಾರನು ತನ್ನ ಮನೆಗೆ ಹಿಂದಿರುಗಿದ ದಿನದ ನಂತರವೂ ಅವಳು ಹಿಂದೆ ಹೇಳಲಾದ ಜನಾರ್ಧನನೊಂದಿಗೆ ಇದ್ದಳು ಎಂಬುದನ್ನು ಹಿಂದೆ ಹೇಳಲಾದ ವಿಡಿಯೋ ರೆಕಾರ್ಡ್ರನಿಂದ ತಿಳಿಯುತ್ತದೆಂದು ಕೌಟುಂಬಿಕ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ದಿನಾಂಕ 09.06.2008 ರಂದು ಬೆಳಗಿನ ಸಮಯದಲ್ಲಿ ಎದುರುದಾರನ ಚಿತ್ರಗಳನ್ನು ಪುನಃ ಅದೇ ದಿನ, ಸಂಜೆಯ ಸಮಯದಲ್ಲಿ ಮೇಲೆ ಹೇಳಲಾದ ಜನಾರ್ಧನನೊಂದಿಗೆ ಅಪೀಲುದಾರಳು ಇರುವುದನ್ನು ಸಹ ಡಿವಿಡಿಯು ತೋರಿಸುತ್ತದೆ.

18. ಅದನ್ನು ಪ್ರತಿಪಾದಿಸುವ ಪಕ್ಷಕಾರನ ಮೇಲೆ ವಾಸ್ತವ ಸಂಗತಿಯನ್ನು ರುಜುವಾತುಪಡಿಸುವ ಹೊಣೆಗಾರಿಕೆಯಿರುತ್ತದೆಯೆಂಬುದು ಸರಳ ಕಾನೂನಾಗಿದೆ.ಪ್ರಸ್ತುತ ಪ್ರಕರಣದಲ್ಲಿ, ಡಿವಿಡಿಯನ್ನು ಮಾರ್ಫ್ ಮಾಡಲಾಗಿದೆಯೆಂದು ಅಪೀಲುದಾರಳು ಒತ್ತಿ ಹೇಳಿದ್ದಾಳೆ.ಆದಾಗ್ಯೂ ಇದರಲ್ಲಿನ ಅಪೀಲುದಾರಳು ಡಿವಿಡಿಯಲ್ಲಿನ ಅಂಶಗಳನ್ನು ಮಾರ್ಫ್ ಮಾಡಲಾಗಿದೆಯೆಂದು ತೋರಿಸಿ ಅಲ್ಲಗಳೆಯಲು ಅಪೀಲುದಾರಳು ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ ಎಂಬುದನ್ನು ಇಲ್ಲಿ ನಮೂದಿಸುವುದು ಯುಕ್ತವಾಗಿದೆ. ಇದರಲ್ಲಿ ತೋರಿಸಲಾದ ಚಿತ್ರಗಳನ್ನು ಮಾರ್ಫ್ ಮಾಡಲಾಗಿದೆಯೋ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಲು ಯಾವುದೇ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಡಿವಿಡಿಯನ್ನು ಕಳುಹಿಸಲು ಯಾವುದೇ ಅರ್ಜಿಯನ್ನು ಅಪೀಲುದಾರಳು ಸಲ್ಲಿಸಿರುವುದಿಲ್ಲ.ಆದಾಗ್ಯೂ, ಅಪೀಲುದಾರಳು ಅಂಥ ಪ್ರಯತ್ನವನ್ನು ಮಾಡಿಲ್ಲ.ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅಪೀಲುದಾರಳು ಯಾವುದೇ ನಿರಾಕರಣೆಯನ್ನು

ಮಾಡಿರುವುದಿಲ್ಲ.ಆರ್ಡಬ್ಲ್ಯೂ.ಎಂದರೆ ಪಕ್ಷಕಾರರ ಮಗಳಾದ ನಾಗಶ್ರೀಗೆ ಸಂಬಂಧಪಡುವಷ್ಟರಮಟ್ಟಿಗೆ ಅವಳು, ತನ್ನ ಸಾಕ್ಷ್ಯದಲ್ಲಿ, ತಾನು ಹಾಗೂ ತನ್ನ ಸಹೋದರಿಯು ದಿನಾಂಕ 04.06.2008 ರಿಂದ 09.06.2008 ರವರೆಗೆ ತಮ್ಮ ತಾಯಿಯೊಟ್ಟಿಗೆ ಬಳ್ಳಾರಿಯಲ್ಲಿ ಇದ್ದೆವೆಂದು ಮಾತ್ರ ಹೇಳಿರುತ್ತಾಳೆ.ಆದಾಗ್ಯೂ, ಹಿಂದೆ ಹೇಳಲಾದ ದಿನಗಳ ಅವಧಿಯಲ್ಲಿ, ಎದುರುದಾರನು ಸಹ ಮನೆಯಲ್ಲಿ ಇದ್ದನೆಂದು ಅವಳು ತಿಳಿಸಿರುವುದಿಲ್ಲ.ಆದುದರಿಂದ, ದಿನಾಂಕ 04.06.2008 ರಿಂದ 09.06.2008 ರ ನಡುವೆ ಎದುರುದಾರನು ಬೆಂಗಳೂರಿನಲ್ಲಿದ್ದನೆಂಬ ಸಂಗತಿಯು ಅವಳ ಸಾಕ್ಷ್ಯದಿಂದಲೂ ರುಜುವಾತಾಗಿರುತ್ತದೆ.

19. ಎದುರುದಾರನು ಅಶ್ಲೀಲ ವಿಡಿಯೋಗಳ ವ್ಯವಹಾರ ನಡೆಸುತ್ತಿದ್ದು, ಅಶ್ಲೀಲ ಚಿತ್ರಗಳಿಗೆ ಸಂಬಂಧಪಡುವಷ್ಟರಮಟ್ಟಿಗೆ ಅವನ ಸ್ನೇಹಿತರೊಂದಿಗೆ ಲೈಂಗಿಕ ಸಂಪರ್ಕ ಹೊಂದಲು ಒತ್ತಾಯಿಸುತ್ತಿದ್ದ ಮತ್ತು ಅಶ್ಲೀಲ ಚಿತ್ರಗಳಲ್ಲಿ ನಟಿಸುವಂತೆ ಬಲವಂತಪಡಿಸುತ್ತಿದ್ದನೆಂಬ ಅಪೀಲುದಾರಳ ವಾದಕ್ಕೆ ಸಂಬಂಧಿಸಿದಂತೆ ಅಪೀಲುದಾರಳು ಆ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಸಮಯದಲ್ಲೂ ಯಾರೊಬ್ಬರಿಗೂ, ದೂರನ್ನು ನೀಡಿಲ್ಲವೆಂಬುದನ್ನು ಹೇಳಲು ಇದು ಸಾಕಾಗುತ್ತದೆ ಎಂಬುದನ್ನು ಸಹ ಇಲ್ಲಿ ನಮೂದಿಸುವುದು ಸೂಕ್ತ.ಆದುದರಿಂದ ಅಪೀಲುದಾರಳ ಹಿಂದೆ ಹೇಳಲಾದ ಆವೃತ್ತಿಯನ್ನು ನಂಬಲು ಸಾಧ್ಯವಾಗುವುದಿಲ್ಲ.

20. ಈ ಹಂತದಲ್ಲಿ, ಒಪ್ಪಿಕೊಂಡಿರುವಂತೆ, ಹಿಂದೂ ವಿವಾಹ (ಕರ್ನಾಟಕ) ನಿಯಮಗಳು, 1956 ಕ್ಕೆ ತಿದ್ದುಪಡಿಯನ್ನು ಮಾಡಲಾಗಿಲ್ಲ.ಅದರಲ್ಲಿ ವ್ಯಭಿಚಾರಿಯನ್ನೂ ಸಹ ಎದುರುದಾರ ಕಕ್ಷಿಗಾರರನ್ನಾಗಿ ಸೇರಿಸುವುದು ಅಗತ್ಯ ಎಂಬುದನ್ನು ಇಲ್ಲಿ ಸೂಚಿಸುವುದು ಯುಕ್ತವೆಂದು ನಾವು ಭಾವಿಸುತ್ತೇವೆ.ಆದುದರಿಂದ ಆಪಾದಿತ ವ್ಯಭಿಚಾರಿಯನ್ನು ಕಕ್ಷಿಗಾರನನ್ನಾಗಿ ಸೇರಿಸದಿರುವುದು ವ್ಯವಹರಣೆಯ ಮೇಲೆ ಯಾವುದೇ ಪರಿಣಾಮವನ್ನು ಬೀರಿರುವುದಿಲ್ಲ.ಅರುಣ್ಕುಮಾರ್ ಅಗರ್ವಾಲ್ -ವಿರುದ್ಧ-ರಾಧಾ ಅರುಣ್ ಹಾಗೂ ಮತ್ತೊಬ್ಬರು, ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು, ಆಪಾದಿತ ವ್ಯಭಿಚಾರಿಯು ಯುಕ್ತ ಪಕ್ಷಕಾರರಾಗುವರು ಎಂದು ಅಭಿಪ್ರಾಯಪಟ್ಟಿದೆ.ಆದಾಗ್ಯೂ, ಮೇಲೆ ತಿಳಿಸಲಾದಂತೆ, ಆಪಾದಿತ ವ್ಯಭಿಚಾರಿಯ ಗೈರುಹಾಜರಿಯು ವ್ಯವಹರಣೆಯ ಮೇಲೆ ಮಾರಕ ಪರಿಣಾಮವನ್ನು ಉಂಟುಮಾಡಲಾರದು.ದಾಖಲೆಯಲ್ಲಿರುವ ಸಾಕ್ಷ್ಯದ ಅತೀ ಸೂಕ್ಷ್ಮ ವಿವೇಚನೆಯ ಆಧಾರದ ಮೇಲೆ ಕೌಟುಂಬಿಕ ನ್ಯಾಯಾಲಯವು ವಿಚ್ಛೇದನದ ಡಿಕ್ರಿಯನ್ನು ನೀಡುತ್ತದೆ.

21. ಹಿಂದಿನ ವ್ಯವಹರಣೆಯ ವಿಶ್ಲೇಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಕೌಟುಂಬಿಕ ನ್ಯಾಯಾಲಯವು ತೆಗೆದುಕೊಂಡ ಅಭಿಪ್ರಾಯಕ್ಕೆ ನಮ್ಮ ಸಮ್ಮತಿಯಿರುತ್ತದೆ.ಇದರ ಪರಿಣಾಮವಾಗಿ, ಅಪೀಲು ವಿಫಲಗೊಂಡಿದ್ದು ಈ ಮೂಲಕ ವಜಾಗೊಂಡಿರುತ್ತದೆ.